**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀನಿವಾಸಪುರ**

**ಸಿಸಿ ಸಂಖ್ಯೆ:382/2018** **CW**-6 **PW**-5

**ಸಾಕ್ಷಿಯನ್ನು ದಿಃ15.05.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಬಿ.ವಿ. ಶಿವಾರೆಡ್ಡಿ |
| ತಂದೆ ಹೆಸರುಃ | ಚಿಕ್ಕವೆಂಕಟರಾಯಪ್ಪ |
| ವಯಸ್ಸುಃ | 57 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಗಂಡರಾಸನಪಲ್ಲಿ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಪ್ರಕರಣದ ಯಾವುದೇ ಮಾಹಿತಿ ಇಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನಿಪಿ-2ರಲ್ಲಿ ನನ್ನ ಸಹಿ ಇದೆ. (ನಿಪಿ-2ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರ್ತಿಸಲಾಯಿತು.) ನಿಪಿ-2 ರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರ ವಿನಂತಿ ಮೇರೆಗೆ ಸಾಕ್ಷಿದಾರರನ್ನು **ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲು ಮಾಡಲಾಯಿತು)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ31.08.2018 ರಂದು ಬೆಳಿಗ್ಗೆ 7 ರಿಂದ 9 ಗಂಟೆ ಸಮಯದಲ್ಲಿ ಆರೋಪಿತರು ಆದಿರಾಜಪಲ್ಲಿ ಗ್ರಾಮದಲ್ಲಿ ಬೋರ್ ವೆಲ್‌ಗೆ ಅಳವಡಿಸಿದ್ದ ಸುಮಾರು 6 ಸಾವಿರ ರೂ ಬೆಲೆ ಬಾಳುವ ಹೊಸ ಕಬ್ಬಿಣದ ಪೆಟ್ಟಿಗೆ ಮತ್ತು 15 ಸಾವಿರ ರೂ ಬೆಲೆ ಬಾಳುವ ಸ್ಟಾಟರ್ ನ್ನು ನಾಶಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರಿಗೆ ಬಗ್ಗೆ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಿಡಿಒರವರು ಸಭೆ ಕರೆಯಿಸಿ ಸರಿಯಾಗಿ ನೀರು ಸರಬರಾಜು ಮಾಡುತ್ತಿಲ್ಲವೆಂದು ಎಚ್ಚರಿಕೆ ನೀಡಿದ್ದ ಕಾರಣ ಈ ರೀತಿ ಆರೋಪಿತರು ನಾಶಪಡಿಸಿದ್ದರು ಎಂದರೆ ಸರಿಯಲ್ಲ. "ನಾನು ........................ಸಹಿ ಮಾಡಿರುತ್ತೇನೆ" ಈ ರೀತಿ ಈಗ ನನಗೆ ಓದಿ ಹೇಳಿದ ಮತ್ತು ಈಗ ಗುರ್ತಿಸಿದ ನಿಪಿ-6 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ದಿಃ31.08.2018 ರಂದು ಪೊಲೀಸರು ಆದಿರಾಜಪಲ್ಲಿ ಗ್ರಾಮಕ್ಕೆ ಬಂದು ಕಬ್ಬಿಣದ ಪೆಟ್ಟಿಗೆ ಮತ್ತು ಸ್ಟಾರ್ಟರ್ ನಾಶಪಡಿಸಿದ್ದನ್ನು ಪರಿಶೀಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಪಂಚನಾಮೆ ಬರೆದು ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಚಾಸಾ-7 ಮತ್ತು 8 ರವರ ಸಮಕ್ಷಮ ಈಗ ನೋಡುತ್ತಿರುವ ಎಂಒ-1 ಪ್ಯಾನಲ್ ಬೋರ್ಡ್‌ನ್ನು ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

(ಕರ್ನ ಸಿಂಗ್ ಆರ್.ಯು)
**C/c ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಶ್ರೀನಿವಾಸಪುರ**